ಇಂತಹವರಿಗೆ ನಿಮಿರು ದೌರ್ಬಲ್ಯ, ಶೀಘ್ರಸ್ಖಲನದಂತಹ ಲೈಂಗಿಕ ಸಮಸ್ಯೆಗಳು ಬರುವುದು ಸಾಮಾನ್ಯ. ಇವೆಲ್ಲವನ್ನು ಅವರಿಗೆ ವಿವರಿಸಿದ ಮೇಲೂ ಕೂಡ ಆ ವ್ಯಕ್ತಿ ತಮ್ಮ ಹೊರಸಂಬಂಧವನ್ನು ಸಮರ್ಥಿಸಿಕೊಂಡರು.

'ನಾನು ಹೆಂಡತಿಗೆ ಯಾವ ಕೊರತೇನೂ ಮಾಡಿಲ್ಲ ಸಾರ್. ಮನೆ, ಕಾರು, ಬೇಕಾದಷ್ಟು ಒಡವೆ, ಹಣ ಎಲ್ಲಾ ಅವಳಿಗೆ ಒದಗಿಸಿಕೊಟ್ಟಿದೀನಿ. ಅವಳು ಬೇಕು ಅಂತ ಬಂದಾಗ ಲೈಂಗಿಕ ಸುಖವನ್ನೂ ಕೊಟ್ಟಿದೀನಿ. ಹಾಗಿದ್ಮೇಲೆ ನಾನು ಹೊರಸಂಬಂಧ ಇಟ್ಟುಕೊಂಡರೆ ಅವಳಿಗೆ ಅನ್ಯಾಯಮಾಡಿದಂತೆ ಆಗಲ್ಲ ಅಲ್ಲವೇ?'

ನಾನು ಮೊನಚಾದ ಪ್ರಶ್ನೆಯೊಂದನ್ನು ಕೇಳಲೇಬೇಕಾಯಿತು – 'ಇದೇ ವಾದವನ್ನು ಮಂಡಿಸಿ ನಿಮ್ಮ ಪತ್ನಿ ಬೇರೆ ಪುರುಷನ ಸಂಬಂಧ ಮಾಡಿದರೆ ನೀವು ಹೇಗೆ ಪ್ರತಿಕ್ರಿಯೆ ತೋರಿಸುತ್ತೀರಿ?'

ಪ್ರಶ್ನೆಗೆ ಉತ್ತರಿಸಲಾಗದೆ ಕುಳಿತಲ್ಲಿಯೇ ಚಡಪಡಿಸುತ್ತಿದ್ದ ಅವರಿಗೆ ಹೇಳಿದೆ – 'ನಿಮಗೆ ಅವಮಾನ ಮಾಡುವುದು ನನ್ನ ಉದ್ದೇಶವಲ್ಲ. ನಿಮ್ಮ ಪತ್ನಿಯನ್ನೂ ಕರೆದುಕೊಂಡು ಬನ್ನಿ. ನಿಮಗೆ ಹೊರ ಸಂಬಂಧದಲ್ಲಿ ಸಿಗುವ ಸುಖಕ್ಕಿಂತ ಹತ್ತಾರು ಪಾಲು ಹೆಚ್ಚಿನ ಲೈಂಗಿಕ ತೃಪ್ತಿಯನ್ನು ಪಡೆಯುವುದು ಹೇಗೆ ಎಂದು ನಾನು ಕಲಿಸುತ್ತೇನೆ. ಆದರೆ ನಿಮ್ಮ ಈಗಿನ ಲೈಂಗಿಕ ಸಮಸ್ಯೆಗೆ ಪರಿಹಾರ ಒದಗಿಸಿ ನಿಮಗೆ ಹೊರ ಸಂಬಂಧವನ್ನು ಮುಂದುವರಿಸಲು ನಾನು ಸಹಾಯ ಮಾಡಲು ಸಾಧ್ಯವಿಲ್ಲ. ನಾನು ದಾಂಪತ್ಯದ ಲೈಂಗಿಕ ಸಮಸ್ಯೆಗಳನ್ನು ಸರಿಮಾಡುವ ಚಿಕಿತ್ಸಕ ಮಾತ್ರ, ನಿಮ್ಮ ದಾಂಪತ್ಯವನ್ನು ಹಾಳುಮಾಡುವ ಆಪ್ತಸಲಹೆಗಾರ ಅಲ್ಲ, ದಯವಿಟ್ಟು ಕ್ಷಮಿಸಿ.'

ಬೇಸರದಿಂದ ಅವರು ಎದ್ದು ಹೋದರು.

ಹೊಸಹೊಸ ವ್ಯಕ್ತಿಗಳೊಡನೆ ಮಾಡುವ ದೇಹ ಸಂಬಂಧದಲ್ಲಿ ಹೆಚ್ಚಿನ ರೋಮಾಂಚನವಿದೆ, ಕದ್ದು ತಿನ್ನುವುದು ಹೆಚ್ಚು ರುಚಿಕರ ಎನ್ನುವ ತಪ್ಪು ತಿಳಿವಳಿಕೆ ಸಾಕಷ್ಟು ಪುರುಷರಲ್ಲಿದೆ. ಮನುಷ್ಯರ ಲೈಂಗಿಕತೆಗೂ, ಪ್ರಾಣಿಗಳ ಲೈಂಗಿಕತೆಗೂ ಇರುವ ವ್ಯತ್ಯಾಸವನ್ನು ಗುರುತಿಸಿಕೊಳ್ಳಲಾಗದೆ ಇಂತವರು ಕುಟುಂಬ ವ್ಯವಸ್ಥೆಯ ಅನುಕೂಲಗಳು, ಸಾಮಾಜಿಕ ಸ್ಥಾನಮಾನಗಳೆಲ್ಲವನ್ನೂ ಒಮ್ಮೆಲೇ ಕಳೆದುಕೊಳ್ಳುವ ಆತಂಕದಲ್ಲಿರುತ್ತಾರೆ. ಇವೆಲ್ಲದರ ಜೊತೆಗೆ ಕಾನೂನು ಮತ್ತು ಲೈಂಗಿಕ ರೋಗಗಳ ಭಯ ಕೂಡ ಅವರ ಮನಸ್ಸನ್ನು ಆವರಿಸಿಕೊಳ್ಳುತ್ತದೆ. ಇಂತಹ ಮನಃಸ್ಥಿತಿಯಲ್ಲಿ ಮುಕ್ತವಾಗಿ ಲೈಂಗಿಕ ಸುಖವನ್ನು ಹೊರಸಂಬಂಧಗಳಲ್ಲಿ ಅನುಭವಿಸುವುದು ಹೇಗೆ ಸಾಧ್ಯ?

## ಎನಂತಹ ಆಕರ್ಷಣೆ?

ಸಾಮಾನ್ಯವಾಗಿ ಸಂಗಾತಿಯಲ್ಲದೆ ಮತ್ತೊಬ್ಬರ ಲೈಂಗಿಕ ಸಹವಾಸಕ್ಕೆ ಆಕರ್ಷಿತರಾಗುವವರನ್ನು 'ಕಾಮದಾಹಿಗಳು' ಎಂದು ಬಿಂಬಿಸಲಾಗುತ್ತದೆ. ಒಂದು ವ್ಯವಸ್ಥಿತ ಕುಟುಂಬ ಜೀವನ, ಸಾಮಾಜಿಕ ಸ್ಥಾನಮಾನ, ಆರ್ಥಿಕ ದುಷ್ಪರಿಣಾಮಗಳು ಎಲ್ಲವನ್ನೂ ಕಡೆಗಣಿಸಿ ಕೇವಲ ಕಾಮಸುಖಕ್ಕಾಗಿ ಹೊರಸಂಬಂಧದ ಕಡೆ ಆಕರ್ಷಿತರಾಗುತ್ತಾರೆಯೇ ಎನ್ನುವ ಬಗ್ಗೆ ಇತ್ತೀಚೆಗೆ ಚರ್ಚೆಗಳಾಗುತ್ತಿವೆ. ದೇಹಗಳ ಮಿಲನವನ್ನು ಗುರಿಯಾಗಿಸಿಕೊಂಡಿರುವ ಇಂತಹ ಸಂಬಂಧಗಳಿಗೆ ಇರಬಹುದಾದ ಇತರ ಒತ್ತಾಸೆಗಳು ಏನಿರಬಹುದು? ಸುಖಮಯ ವೈವಾಹಿಕ ಜೀವನ ನಡೆಸುತ್ತಿರುವವರೂ ಕೂಡ ಕೆಲವೊಮ್ಮೆ ಹೊರಸಂಬಂಧಗಳ ಕಡೆ ಹೊರಳಿಕೊಳ್ಳುವುದು ಸಾಧ್ಯ ಎಂದಾದರೆ ಕಾಮದಾಹ ಮಾತ್ರ ಇದಕ್ಕೆ ಕಾರಣ ಎಂದು ಹೇಳುವುದು ಹೇಗೆ?

ಯಾವುದೇ ಹೊರಸಂಬಂಧಕ್ಕೆ ಇಂತಹುದೇ ಕಾರಣ ಮತ್ತು ಇದೇ ಪರಿಹಾರ ಎಂದು ಸ್ಪಷ್ಟವಾಗಿ ಹೇಳುವುದು ತೀರಾ ಸರಳೀಕೃತ ವಿವರಣೆಯಾಗುತ್ತದೆ. ತಜ್ಞರು ಹೇಳುವಂತೆ ಭಾವನಾತ್ಮಕ ಸೆಳೆತದ ಅಂಶಗಳು ಎಲ್ಲಾ ವಿವಾಹಬಾಹಿರ ಸಂಬಂಧಗಳಲ್ಲಿ ಇದ್ದೇ ಇರುತ್ತವೆ. ಸಂಗಾತಿಯಿಂದ ಸಿಗದ ಆತ್ಮೀಯತೆ, ಭಾವನಾತ್ಮಕ ತೃಪ್ತಿ, ಗೌರವ ಮತ್ತು ಸ್ವಂತಿಕೆಯ ಹುಡುಕಾಟ ಮುಂತಾದ ಕಾರಣಗಳು ಬೇರೆ ಸಂಗಾತಿಯ ಕಡೆಗೆ ವ್ಯಕ್ತಿಯನ್ನು ಸೆಳೆಯಬಹುದು. ಇದನ್ನೆಲ್ಲಾ ದಾಂಪತ್ಯದಲ್ಲಿಯೇ ಹುಡುಕಿಕೊಳ್ಳಬಹುದಲ್ಲವೇ? ಅದಕ್ಕೇಕೆ ಹೊರಸಂಬಂಧಗಳ ಮೊರೆ ಹೋಗಬೇಕು? ಮೋಸ ಹೋಗಿರುವವರು ಸಂಗಾತಿಯ ಅಗತ್ಯವನ್ನು ಮೊದಲೇ ಗುರುತಿಸಬಹುದಿತ್ತಲ್ಲವೇ? ಎನ್ನುವ ಅನುಮಾನಗಳು ಸರಿಯಾದದ್ದೇ. ಆದರೆ ದಂಪತಿಗೆ ತಮಗೆ ಬೇಕಾಗಿರುವುದು ಏನು ಮತ್ತು ಅದನ್ನು ಹಂಚಿಕೊಂಡು



